ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1228
ಸದಸ್ಯರ ಹೆಸರು : ಶ್ರೀ ರಿಜ್ವಾನ್ ಅರ್ಷದ್
ಉತ್ತರಿಸುವ ದಿನಾಂಕ: : 21-12-2018
ಉತ್ತರಿಸುವವರು : ಉಪ ಮುಖ್ಯಮಂತ್ರಿಯವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	2006-07ರಿಂದ ಈವರೆಗೂ ಬೆಂಗಳೂರು ಅಭಿವೃದ್ಧಿಗಾಗಿ ಕೈಗೊಳ್ಳಲಾದ ಕ್ರಮಗಳ ಬಗ್ಗೆ ಆಡಳಿತಾತ್ಮಕ ವರದಿಯನ್ನು ಮಂಡನೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ;	ಬಂದಿದೆ. 2015-16ನೇ ಸಾಲಿನಲ್ಲಿ 2006-07 ರಿಂದ 2011-12ನೇ ಸಾಲಿನ ವರೆಗಿನ 6 ವರ್ಷಗಳ ಆಡಳಿತ ವರದಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ಮಂಡಿಸಲಾಗಿರುತ್ತದೆ. 2012-13ನೇ ಸಾಲಿನಿಂದ 2016-17 ರವರೆಗಿನ ಆಡಳಿತ ವರದಿಗಳನ್ನು ಮಾನ್ಯ ಉಪ ಮಹಾಪೌರರ ಸೂಚನೆಯಂತೆ ಮುಂದಿನ 2 ತಿಂಗಳೊಳಗಾಗಿ ಮಂಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.
ಆ	ಕಳೆದ 12 ವರ್ಷಗಳಿಂದ ವರದಿ ಮಂಡಿಸದೇ ಇರುವುದರಿಂದ ಬೆಂಗಳೂರು ಅಭಿವೃದ್ಧಿಗಾಗಿ ಕೈಗೊಳ್ಳಲಾದ ಆಡಳಿತಾತ್ಮಕ ಕ್ರಮ, ನ್ಯಾಯಾಲಯ ಪ್ರಕರಣ ಮತ್ತು ಇನ್ನಿತರ ಅಂಶಗಳ ಮಾಹಿತಿ ಲಭ್ಯವಿಲ್ಲದೆ ತೊಂದರೆ ಆಗಿದ್ದು ಈ ಬಗ್ಗೆ ಮಾಹಿತಿ ನೀಡುವುದು;	ಕ್ರಮ ಸಂಖ್ಯೆ-ಅ ರಲ್ಲಿ ಈಗಾಗಲೇ ನಮೂದಿಸಿರುವಂತೆ 2006-07 ನೇ ಸಾಲಿನಿಂದ 2011-12 ನೇ ಸಾಲಿನವರೆಗೆ ಬರುವ 6 ವರ್ಷಗಳ ಆಡಳಿತ ವರದಿಯನ್ನು ಮಂಡಿಸಲಾಗಿದ್ದು, ಮಂಡಿಸಲು ವಿಳಂಬವಾಗಿದ್ದ ಕಾರಣ ಯಾವುದೇ ತೊಂದರೆಯಾಗಿರುವುದಿಲ್ಲ.
ಇ	ಇಷ್ಟು ಸುಧೀರ್ಘ ಕಾಲ ಆಡಳಿತಾತ್ಮಕ ವರದಿ ವಿಳಂಬಕ್ಕೆ ಕಾರಣಗಳೇನು; ಇದರ ಜವಾಬ್ದಾರಿ ಯಾರದಾಗಿರುತ್ತದೆ, ವಿಳಂಬಕ್ಕೆ ಕಾರಣರಾದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; ಯಾವಾಗ ವರದಿ ಮಂಡಿಸಲಾಗುವುದು? (ಸ್ಪಷ್ಟ ಮಾಹಿತಿ ನೀಡುವುದು)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತ ವರದಿಗೆ ಸಂಬಂಧಿಸಿದ ಮಾಹಿತಿಯನ್ನು ಕ್ರೋಢೀಕರಿಸುವ ಕೆಲಸವು ಸಾಂಖ್ಯಿಕ ವಿಭಾಗದ್ದಾಗಿದ್ದು, ಸಾಂಖ್ಯಿಕ ಶಾಖೆಯಿಂದ ಜಂಟಿ ಆಯುಕ್ತರುಗಳು ಹಾಗೂ ಇತರೆ ವಲಯ ಮಟ್ಟದ ಅಧಿಕಾರಿಗಳೊಂದಿಗೆ ಹಲವಾರು ಪತ್ರ ವ್ಯವಹಾರ ನಡೆಸಿದ್ದು, ಮಾಹಿತಿ ಕ್ರೋಢೀಕರಣವಾಗದೇ ಇದ್ದ ಕಾರಣ ವಿಳಂಬವಾಗಿರುತ್ತದೆ. ಸದರಿ ವರದಿಗಳನ್ನು ಪಾಲಿಕೆಯ ಕೌನ್ಸಿಲ್ ಸಭೆಗೆ ಮಂಡಿಸುವ ಜವಬ್ದಾರಿಯು ಉಪ ಮಹಾಪೌರರವರದ್ದಾಗಿರುತ್ತದೆ. ವರದಿ ಮಂಡಿಸಲು ಅಗತ್ಯವಿರುವ ಮಾಹಿತಿಗಳನ್ನು ಸಕಾಲಕ್ಕೆ ನೀಡದ ಅಧಿಕಾರಿಗಳಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿರುತ್ತದೆ. ಫೆಬ್ರವರಿ-2019ರಲ್ಲಿ, 2012-13ನೇ ಸಾಲಿನಿಂದ 2016-17ನೇ ಸಾಲಿನ ಆಡಳಿತ ವರದಿಗಳನ್ನು ಮಂಡಿಸಲು ಉಪ ಮಹಾಪೌರರ ನೇತೃತ್ವದಲ್ಲಿ ಈಗಾಗಲೇ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಸಂಖ್ಯೆ: ನಅಇ 639 ಎಂಎನ್‌ವೈ 2018

(ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು